ಚಿತ್ರದುರ್ಗ ಜಿಲ್ಲೆಯಲ್ಲಿರುವ ಜನತಾ ಮನೆಗಳ ಬಗೆ

೨೩೯ (೯೪) ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಈಗ ಜನತಾ ಮನೆಗಳ ನಿರ್ವಹಣೆ ಕಾರ್ಯ ಮುಗಿದಿದ್ದರೂ ಕೂಡ ಹಣ ಕೊಡದೆ ಇರುವ ಜನತಾ ಮನೆಗಳ ಸಂಖ್ಯೆ ಎಷ್ಟು ?

(ಆ) ಜನತಾ ಮನೆಗಳಿಗೆ ಎಷ್ಟು ಜನ ಸರ್ಕಾರದವರು ಮಂಜೂರು ಮಾಡಬೇಕಾಗಿದೆ;

(ಇ) ಯಾವಾಗ ಪೂರ್ತಿ ಹಣ ಮಂಜೂರು ಮಾಡಲಾಗುವುದು ?

ಕುಷ್ಟಗಿಯಲ್ಲಿ ರಸ್ತೆ ಸಾರಿಗೆ ಡಿಪೋ ಹಾಗೂ ಬಸ್ ನಿಲ್ದಾಣ ನಿರ್ಮಿಸುವ ಬಗ್ಗೆ

೨೪೦ (೧೫೯) ಶ್ರೀ ಹನುಮಗೌಡ ಪಾಟೀಲ್ (ಕುಷ್ಟಗಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ರಾಜ್ಯ ಸಚಿವರು ದಯೆಯಿಟ್ಟು ಉತ್ತರಿಸುವರೆ;—

(ಅ) ೧೫ ವರ್ಷಗಳ ಹಿಂದೆ ಕುಷ್ಟಗಿಯಲ್ಲಿ ಬಸ್ ನಿಲ್ದಾಣಕ್ಕಾಗಿ ಭೂ ಸ್ವಾಧೀನ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಕುಷ್ಟಗಿಯು ತಾಲ್ಲೂಕಿನ ಮುಖ್ಯ ಸ್ಥಳವಾಗಿದ್ದು ಪ್ರಯಾಣಿಕರ ದಟ್ಟಣೆ ವಿಪರೀತವಾಗಿರುವುದರಿಂದ ಸರ್ಕಾರದವರು ಬಸ್ ನಿಲ್ದಾಣವನ್ನು ನಿರ್ಮಿಸಲು ತೀವ್ರ ಕ್ರಮ ಕೈಗೊಳ್ಳುವರೇ?

(ಇ) ಇದೇ ಆರ್ಥಿಕ ವರ್ಷದಲ್ಲಿ ಬಸ್ ಡಿಪೋ ಹಾಗೂ ಬಸ್ ನಿಲ್ದಾಣವನ್ನು ನಿರ್ಮಿಸಲಾಗುವುದೇ?

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—

(ಅ) ಬಂದಿದೆ.

(ಆ) ಸಾರಿಗೆ ನಿಗಮದ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

(ಇ) ಕುಷ್ಟಗಿಯಲ್ಲಿ ಡಿಪೋ ನಿರ್ಮಾಣ ಸಧ್ಯಕ್ಕೆ ಅವಶ್ಯವಿಲ್ಲವೆಂದು ಕಂಡು ಬಂದಿದೆ. ಬಸ್ ನಿಲ್ದಾಣ ನಿರ್ಮಾಣ ಕಾರ್ಯವನ್ನು ಹಣಕಾಸಿನ ಕೊರತೆಯಿಂದಾಗಿ ಪ್ರಸಕ್ತ ಸಾಲಿನ ಬಡ್ಜೆಟ್‌ನಲ್ಲಿ ಸೇರಿಸಲು ಸಾಧ್ಯವಾಗಿಲ್ಲ. ಮುಂದೆ ಸಂಸ್ಥೆಯು ಆರ್ಥಿಕ ಪರಿಸ್ಥಿತಿಗನುಗುಣವಾಗಿ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ನಂಜನಗೂಡಿನಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸುವುದು

೨೪೧ (೨೫೮) ಶ್ರೀ ಎಂ. ಮಹಾದೇವ್ (ನಂಜನಗೂಡು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾರ್ಮಿಕ ಮತ್ತು ಪಕ್ಷ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ :—

(ಅ) ನಂಜನಗೂಡಿನಲ್ಲಿ ಒಂದು ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸುವ ಯೋಜನೆ ಏನಾದರೂ ಇದೆಯೇ?

(ಆ) ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಅಲ್ಲಿ ಇದೇ ವಿದ್ಯಾ ವರ್ಷದಲ್ಲಿ ಪ್ರಾರಂಭಿಸಲು ಸರ್ಕಾರವು ತೆಗೆದುಕೊಂಡತಹ ಕ್ರಮಗಳೇನು?

ಶ್ರೀ ಎಂ. ರಘುಪತಿ (ಕಾರ್ಮಿಕ ಮಂತ್ರಿಗಳ ಪರವಾಗಿ).—

(ಅ) ಇಲ್ಲ.

(ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.